# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಅರವಿಂದ ಕುಮಾರ್ ಅರಳಿ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1913 |
| ಉತ್ತರಿಸುವ ದಿನಾಂಕ | 16.03.2022 |
| ಉತ್ತರಿಸುವ ಸಚಿವರು | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಅನು ಕ್ರಮ | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ 2017-18 ರಿಂದ 2021-22 ರವರೆಗೆ ಬೀದರ್ ಜಿಲ್ಲೆಯಲ್ಲಿ ನಗರ ಸಭೆಯಿಂದ ಆಯ್ಕೆಯಾದ ಫಲಾನುಭವಿಗಳ ಸಂಖ್ಯೆ ಎಷ್ಟು; (ಪೂರ್ಣ ವಿವರಗಳೊಂದಿಗೆ ಮಾಹಿತಿ ನೀಡುವುದು) | ಬೀದರ್ ಜಿಲ್ಲೆಯಲ್ಲಿ 2017-18 ರಿಂದ 2020-21ನೇ ಸಾಲಿನವರೆಗೆ ವಿವಿಧ ವಸತಿ ಯೋಜನೆಯಡಿ ಒಟ್ಟು 13,063 ಮನೆಗಳು ಮಂಜೂರಾಗಿದ್ದು, 1,967 ಮನೆಗಳು ಪೂರ್ಣಗೊಂಡಿರುತ್ತವೆ. 1,702 ಮನೆಗಳು ಪ್ರಗತಿಯಲ್ಲಿದ್ದು, 9,570 ಮನೆಗಳು ಪ್ರಾರಂಭವಾಗಬೇಕಿರುತ್ತದೆ. ಉಳಿದಂತೆ 364 ಮನೆಗಳನ್ನು ಫಲಾನುಭವಿಗಳು ನಿಗದಿತ ಅವಧಿಯಲ್ಲಿ ಪ್ರಾರಂಭ ಮಾಡಿಕೊಳ್ಳದೇ ಇರುವುದರಿಂದ ಅವು ರದ್ದಾಗಿರುತ್ತವೆ.<br><br>ಯೋಜನಾವಾರು ವಿವರವು ಈ ಕೆಳಕಂಡಂತಿದೆ:- |

| ಯೋಜನೆ | ಆಯ್ಕೆ / ಅನು ಮೋದನೆ | ಪೂರ್ಣ | ಪ್ರಗತಿ | ಪ್ರಾರಂಭ ವಾಗದ ಮನೆಗಳು | ರದ್ದಾದ ಮನೆಗಳು |
|---|---|---|---|---|---|
| ಡಾ: ಬಿ.ಆರ್. ಅಂಬೇಡ್ಕರ್ ನಗರ ವಸತಿ ಯೋಜನೆ | 1233 | 690 | 417 | 0 | 126 |
| ದೇವರಾಜ ಅರಸು ನಗರ ವಸತಿ ಯೋಜನೆ | 22 | 1 | 6 | 15 | 0 |
| ವಾಜಪೇಯಿ ನಗರ ವಸತಿ ಯೋಜನೆ | 1290 | 666 | 386 | 0 | 238 |
| ಪ್ರಧಾನ ಮಂತ್ರಿ ಆವಾಸ್ ಯೋಜನೆ ನಗರ – BLC Non convergence | 2311 | 116 | 752 | 1443 | 0 |
| ಪ್ರಧಾನ ಮಂತ್ರಿ ಆವಾಸ್ ಯೋಜನೆ ನಗರ – AHP | 4600 | 0 | 0 | 4600 | 0 |
| ಪ್ರಧಾನ ಮಂತ್ರಿ ಆವಾಸ್ ಯೋಜನೆ ನಗರ – AHP-KSDB | 4147 | 494 | 141 | 3512 | 0 |
| **ಒಟ್ಟು:** | **13603** | **1967** | **1702** | **9570** | **364** |

2021-22 ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ: ವಇ 44 ಹೆಚ್‌ಎಹೆಚ್ 2021 (ಭಾಗ-2), ದಿನಾಂಕ: 31.12.2021 ರನ್ವಯ ಬೀದರ್ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ 550 ಹೊಸ ಮನೆಗಳ ಗುರಿಯನ್ನು ಹಂಚಿಕೆ ಮಾಡಲಾಗಿದ್ದು, ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಯೋಜನಾವಾರು ವಿವರವು ಈ ಕೆಳಕಂಡಂತಿದೆ:-

| ಕ್ರ. ಸಂ. | ಸ್ಥಳೀಯ ಸಂಸ್ಥೆಗಳು | ಡಾ: ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನ (ನಗರ) | ವಾಜಪೇಯಿ ನಗರ ವಸತಿ ಯೋಜನ |
|---|---|---|---|
| 1 | ಔರಾದ ಪಟ್ಟಣ ಪಂಚಾಯಿತಿ | 12 | 38 |
| 2 | ಚಿಟಗುಪ್ಪಾ ಪುರಸಭೆ | 18 | 57 |
| 3 | ಬಸವಕಲ್ಯಾಣ ನಗರ ಸಭೆ | 24 | 76 |
| 4 | ಬೀದರ ನಗರ ಸಭೆ | 24 | 76 |
| 5 | ಭಾಲ್ಕಿ ಪುರಸಭೆ | 18 | 57 |
| 6 | ಹಳ್ಳಿಖೇಡ ಪುರಸಭೆ | 18 | 57 |
| 7 | ಹುಮನಾಬಾದ ಪುರಸಭೆ | 18 | 57 |
| | **ಒಟ್ಟು:** | **132** | **418** |

| | | |
|---|---|---|
| ಆ | ಬೀದರ್ ನಗರ ಸಭೆಯಿಂದ ಜಿ+3 ವಸತಿ ಯೋಜನೆಗೆ ಎಷ್ಟು ಅರ್ಜಿಗಳು ಬಂದಿವೆ; ಇದರಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆಯೇ; (ಮಾಡಿದ್ದಲ್ಲಿ, ವಿವರ ನೀಡುವುದು) | ಬೀದರ ನಗರ ಸಭೆಯಲ್ಲಿ ಜಿ+3 ವಸತಿ ಯೋಜನೆಯಡಿ ಒಟ್ಟು 6,945 ಅರ್ಜಿಗಳು ಬಂದಿದ್ದು, ಇದರಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಕರ ವಸೂಲಿಗಾರರ ವರದಿಯಂತೆ ಒಟ್ಟು 2,899 ಫಲಾನುಭವಿಗಳು ಅರ್ಹರಾಗಿರುತ್ತಾರೆ ಮತ್ತು ಸದರಿ ಫಲಾನುಭವಿಗಳ ಆಯ್ಕೆ ಪಟಿಯನ್ನು ಮಾನ್ಯ ಶಾಸಕರ ನೇತೃತ್ವದಲ್ಲಿನ ಆಶ್ರಯ ಸಮಿತಿಯು ನಿಯಮಾನುಸಾರ ಪರಿಶೀಲಿಸಿ, ಆಯ್ಕೆ ಪಟ್ಟಿಗೆ ತನ್ನ ಅನುಮೋದನೆಯನ್ನು ನೀಡಬೇಕಾಗಿದ್ದು, ಅದು ಅನುಮೋದನೆಯ ಹಂತದಲ್ಲಿ ಬಾಕಿ ಇರುತ್ತದೆ. |
| ಇ | ಇಲ್ಲವಾದಲ್ಲಿ ವಿಳಂಬವಾಗಿರುವುದಕ್ಕೆ ಕಾರಣವೇನು; | ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) - A.H.P. ಘಟಕದಡಿ ಬೀದರ್ ನಗರಸಭೆ ವ್ಯಾಪ್ತಿಯಲ್ಲಿ ಕೇಂದ್ರ ಸರ್ಕಾರದಿಂದ ಅನುಮೋದನೆಗೊಂಡಿರುವ ಯೋಜನೆಯನ್ನು ಪ್ರಾರಂಭಿಸಲು ಫಲಾನುಭವಿಗಳ ಆಯ್ಕೆಯಾಗಿರಬೇಕು. ಆಯ್ಕೆಯಾದ ಫಲಾನುಭವಿಗಳು ತಮ್ಮ ಪಾಲಿನ ವಂತಿಕೆ ಮೊತ್ತದಲ್ಲಿ ಕನಿಷ್ಟ ರೂ. 10,000/- (ಹತ್ತು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಪ್ರಾರಂಭಿಕ ರೇವಣಿಯಾಗಿ ಕಡ್ಡಾಯವಾಗಿ ಪಾವತಿಸಬೇಕು ಮತ್ತು ಫಲಾನುಭವಿಗಳಿಗೆ ಬ್ಯಾಂಕ್ ಸಾಲ ಸೌಲಭ್ಯ ಒದಗಿಸಲು ಎಲ್ಲಾ ದಾಖಲೆಗಳನ್ನು ಬ್ಯಾಂಕ್‌ಗಳಿಗೆ ಸಲ್ಲಿಸಿರಬೇಕಾಗುತ್ತದೆ. ಆದರೆ, ಸದರಿ ಯೋಜನೆಗೆ ಇನ್ನೂ ಫಲಾನುಭವಿಗಳ ಆಯ್ಕೆಯಾಗಿರುವುದಿಲ್ಲ. |
| ಈ | ಜಿ+3 ವಸತಿ ಕಟ್ಟಡ ಕಾಮಗಾರಿಯನ್ನು ಯಾವ ಸಂಸ್ಥೆಗೆ ಒಪ್ಪಿಸಲಾಗಿದೆ; ಈ ಕಾಮಗಾರಿಯನ್ನು ಯಾವ ಹಂತದ ಗುತ್ತಿಗೆದಾರಿಂದ ಟೆಂಡರ್ ಕರೆಯಾಗಿದೆ? | ಫಲಾನುಭವಿಗಳನ್ನು ಆಯ್ಕೆ ಮಾಡಿ, ವಂತಿಕೆ ಸಂಗ್ರಹಿಸಿ, ಬ್ಯಾಂಕ್‌ಗಳಿಗೆ ಫಲಾನುಭವಿಗಳ ದಾಖಲೆಗಳನ್ನು ಒದಗಿಸಿದ ನಂತರ ನಿಯಮಾನುಸಾರ ಟೆಂಡರ್ ಆಹ್ವಾನಿಸಿ, ಮುಂದಿನ ಕ್ರಮ ವಹಿಸಲಾಗುವುದು. |

[ಸಂಖ್ಯೆ: ವಇ 75 ಹೆಚ್‌ಎಫ್‌ಎ 2022]

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು.